**ಓ ಎಸ್ ನಂಃ 54-17**
**ಪಿ ಡಬ್ಲ್ಯೂ ಃ 1**

**ದಿಃ 18-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಪಿ ವಕೀಲರಿಂದ**

21. ಸಾಕ್ಷಿಗೆ ಒಂದು ಶುದ್ಧ ಕ್ರಯದ ಮುಂಗಡ ಕರಾರು ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಶುದ್ಧ ಕ್ರಯದ ಮುಂಗಡ ಕರಾರು ಪತ್ರವನ್ನು ನೋಡಿ ಗುರುತಿಸಿದ್ದು ಇರುತ್ತದೆ ಸದರಿ ದಾಖಲಾತಿಯಲ್ಲಿ ಪ್ರತಿವಾದಿ 1 ರಿಂದ 3 ರವರ ಸಹಿ ಇರುತ್ತದೆಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಯು ಸದರಿ ಕ್ರಯದ ಮುಂಗಡ ಕರಾರು ಪತ್ರವನ್ನು ಗುರುತಿಸಿದ್ದರ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ 2 ಎಂದು ಗುರುತಿಸಲಾಯಿತು.

ಸದರಿ ನಿಡಿ 2 ರ ದಾಖಲಾತಿಗೆ ನರಸಿಂಹಯ್ಯರವರು ಮತ್ತು ಸಿದ್ದಗಂಗಯ್ಯರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಡಿ 2 ರ ದಾಖಲಾತಿಯನ್ನು ವಿಎಸ್ ಎಸ್ ಎಲ್ ಸೊಸೈಟಿ ತಾವರೆಕೆರೆಯಲ್ಲಿ ದಿನಾಂಕಃ 18-07-2013 ರಲ್ಲಿ ಸ್ಟಾಂಪ್ ಪೇಪರ್ ಖರೀದಿ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಸ್ಟಾಂಪ್ ಪೇಪರನ್ನು ಅರವಿಂದ, ಮಂಜುಳ, ಜಗದೀಶ್ ಮತ್ತು ನಾಗಶ್ರೀ ರವರ ಹೆಸರಿನಲ್ಲಿ ಪಡೆಯಲಾಗಿರುತ್ತದೆ ಎಂದರೆ ಸರಿ. ಸದರಿ ಸ್ಟಾಂಪ್ ಪೇಪರ್ ಖರೀದಿ ಮಾಡಿದ ದಿನ ನಿಡಿ 2 ಕರಾರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲಾತಿ ನಿಡಿ 2 ರ ಮೂಲಕ ಪ್ರತಿವಾದಿ 5 ರವರಿಗೆ ರೂ.18,00,000/-ಕ್ಕೆ ಗಳಿಗೆ ಕರಾರು ಆಗಿ ಒಟ್ಟು ರೂ.11,50,000/- ಗಳನ್ನು ಕೊಡಲಾಗಿರುತ್ತದೆ ಎಂದರೆ ನನಗೆ ಅದರ ಮಾಹಿತಿ ಇರುವುದಿಲ್ಲ ಎಂದು ಹೇಳಿ ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯದಲ್ಲಿ ನೋಡಿರುತ್ತೇನೆ ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಾನು ಇದಕ್ಕೂ ಮೊದಲು ನೋಡಿರುವುದಿಲ್ಲ. ಸದರಿ ದಾಖಲಾತಿಯಲ್ಲಿ ಇನ್ನುಳಿಕೆ ಹಣವಾದ ರೂ.6,50,000/-ಗಳನ್ನು 11 ತಿಂಗಳ ಒಳಗೆ ಕೊಡುವುದಾಗಿ ಕರಾರು ಆಗಿತ್ತು ಎಂದರೆ ಗೊತ್ತಿಲ್ಲ.

22. ದಿನಾಂಕಃ 07-02-2014 ರಂದು ಪ್ರತಿವಾದಿ ನಂ.1 ರಿಂದ 3 ರವರು ಪ್ರತಿವಾದಿ 5 ರಿಂದ ಹಣ ಪಡೆದು ಕ್ರಯಪತ್ರವನ್ನು ನೊಂದಾಯಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿ ನೊಂದಣಿಯಾಗಿರುತ್ತದೆ ಮತ್ತು ನಾನು ಅದೇ ಕಾರಣದಿಂದ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ. ನಿಡಿ 1 ರಲ್ಲಿ ಸಿದ್ದಗಂಗಯ್ಯ ಮತ್ತು ಕೆಂಗೇರಿ ಮಹೇಶ್ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ನಿಡಿ 2 ಕರಾರನ್ನು ಮಾಡಿದ ನಂತರ ನಾನು ನಿಪಿ 3 ನ್ನು ಶರೀಕಾಗಿ ಪ್ರತಿವಾದಿ 4 ಮತ್ತು 5 ರವರಿಗೆ ಮೋಸ ಮಾಡುವ

ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. ಸದರಿ ನಿಪಿ 3ರ ದಾಖಲಾತಿಯನ್ನು ಮಾಡಿಕೊಳ್ಳುವ ಸಮಯದಲ್ಲಿ ನನ್ನ ಹತ್ತಿರ ಬ್ಯಾಂಕ್ ಖಾತೆ ಇದ್ದರೂ ಪ್ರತಿವಾದಿಗಳು ನಗದಾಗಿ ಹಣ ಕೊಡಲು ಕೇಳಿದ ಕಾರಣ ನಾನು ಅದರಲ್ಲಿ ನಗದಾಗಿ ಹಣವನ್ನು ಕೊಟ್ಟಿರುತ್ತೇನೆ. ನಾನು ಬ್ಯಾಂಕಿನಿಂದ ಯಾವುದೇ ಹಣವನ್ನು ಆ ದಿನ ತಂದಿರುವುದಿಲ್ಲ ನನ್ನ ಹತ್ತಿರ ಹಣ ಇತ್ತು. ನಾನು ಸದರಿ ಹಣವನ್ನು ಇತ್ತು ಎಂದು ತೋರಿಸಲು ಐ ಟಿ ಕಟ್ಟಿರುವುದಿಲ್ಲ.

23. ನಾನು ಪ್ರತಿವಾದಿ 1 ರಿಂದ 3ರವರಿಗೆ ರೂ.15,00,000/- ಗಳನ್ನು ನಗದಾಗಿ ಕೊಟ್ಟಿರುತ್ತೇನೆ. ಸದರಿ ಹಣವನ್ನು ನಾನೇ ಸಂಪಾದನೆ ಮಾಡಿದ ಹಣವಾಗಿರುತ್ತದೆ. ಸದರಿ ಹಣವನ್ನು 2-3 ವರ್ಷಗಳಿಂದ ಚೀಟಿ ಮತ್ತು ಇತ್ಯಾದಿಗಳಿಂದ ಕೂಡಿಟ್ಟಿರುತ್ತೇನೆ. ನನ್ನ ಬ್ಯಾಂಕಿನಲ್ಲಿ ಖಾತೆಯಿದ್ದರೂ ನಾನು ಹಣವನ್ನು ಮನೆಯಲ್ಲಿ ಏಕೆ ಇಟ್ಟುಕೊಂಡಿದ್ದೆ ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ ಏನಾದರೂ ಹೆಚ್ಚು ಕಡಿಮೆ ಆದರೆ ಆ ಸಮಯದಲ್ಲಿ ನಾನು ಇಲ್ಲದೇ ಇದ್ದರೆ ಮತ್ತು ಆಲ್ ಇಂಡಿಯಾ ಟೂರ್ ಹೋಗಿದ್ದರೆ ಹೆಂಡತಿ ಮಕ್ಕಳಿಗೆ ಸದರಿ ಹಣ ಅನುಕೂಲವಾಗಲಿ ಎಂದು ಇಟ್ಟಿರುತ್ತೇನೆ. ನನ್ನ ಹತ್ತಿರ ಯಾವುದೇ ಹಣ ಇರಲಿಲ್ಲ ನಾನು ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಸದರಿ ಹಣವನ್ನು ನಾನು ನಿಪಿ 3 ನೊಂದಣಿಯಾಗುವ ಸಮಯದಲ್ಲಿ ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ನೀಡಿರುತ್ತೇನೆ. ಉಪ ನೊಂದಣಾಧಿಕಾರಿ ಸದರಿ ಹಣದ ಬಗ್ಗೆ ಬರೆದಿರುತ್ತಾರಾ ಎಂದರೆ ಸಾಕ್ಷಿಯು ನಿಪಿ 3ರಲ್ಲಿ ಶೀಲು ಮತ್ತು ಸಹಿ ಮಾಡಿರುತ್ತಾರೆ. ಸದರಿ ಶೀಲು ಜೊತೆಗೆ ಹಣ ಕೊಟ್ಟಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಉಪ ನೊಂದಣಾಧಿಕಾರಿ ಆ ರೀತಿ ಬರೆಯುವುದಿಲ್ಲ ಎಂದು ಹೇಳುತ್ತಾರೆ. ಉಪ ನೊಂದಣಾಧಿಕಾರಿಗಳು ಆ ರೀತಿ ಹಣದ ಬಗ್ಗೆ ಪತ್ರದಲ್ಲಿ ಬರೆಯುತ್ತಾರೆ ಎಂದರೆ ಸಾಕ್ಷಿಯು ನಿಪಿ 3ರಲ್ಲಿ ಬರೆದಿರುವುದಿಲ್ಲ ಎಂದು ಹೇಳುತ್ತಾರೆ.

24. ನಾನು ಅವರ ಮುಂದೆ ಹಣವನ್ನು ಕೊಟ್ಟಿರುವುದು ಬಿಟ್ಟು ಬೇರೆಲ್ಲೂ ಕೊಟ್ಟಿರುವುದಿಲ್ಲ. ಅವರ ಮುಂದೆ ಬಿಟ್ಟರೆ ನಾನು ಎಲ್ಲೂ ಹಣವನ್ನು ನಿಪಿ3ರಂತೆ ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸುಳ್ಳು. ನಿಪಿ3 ಮೋಸ ಮಾಡಲು ಸೃಷ್ಟಿ ಮಾಡಿದ ಕರಾರು ಪತ್ರ ಎಂದರೆ ಸುಳ್ಳು.

25. ದಾವಾ ಸ್ವತ್ತಿನ ಖಾತಾ ಮತ್ತು ಎಲೆಕ್ಟ್ರಿಸಿಟಿ ಬಿಲ್ಲಿನಲ್ಲಿ ಹೆಸರು ಪ್ರತಿವಾದಿ 4 ಮತ್ತು 5ರವರ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಸುಳ್ಳು. ಸಾಕ್ಷಿಗೆ ಡಿಮ್ಯಾಂಡ್ ಎಕ್ಸ್ಟ್ರಾಕ್ಟ್ ನ್ನು (ಖಾತಾ ಎಕ್ಸ್ಟ್ರಾಕ್ಟ್) ಮತ್ತು ಅಸೆಸ್‌ಮೆಂಟನ್ನು ತೋರಿಸಲಾಗಿ ಸದರಿ ಡಿಮ್ಯಾಂಡ್ ಎಕ್ಸ್ಟ್ರಾಕ್ಟ್ ಮತ್ತು ಅಸೆಸ್‌ಮೆಂಟನ್ನು ನಿಡಿ 3 ಮತ್ತು ನಿಡಿ4 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ದಾಖಲಾತಿಯನ್ನು ನಾನು ಈಗಲೇ ನೋಡುತ್ತಿರುವುದು ಎಂದು ನುಡಿಯುತ್ತಾರೆ.

26. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ನಾನು ಸದರಿ ವಿಷಯವನ್ನು ನಮ್ಮ ವಕೀಲರಿಗೆ ಕನ್ನಡದಲ್ಲಿ ಹೇಳಿರುತ್ತೇನೆ. ನಾನು ವಕೀಲರ ಹತ್ತಿರ ನೊಂದಣಿಯಾದ 6 ತಿಂಗಳ ನಂತರ ವಕೀಲರ ಹತ್ತಿರ ಹೋದಾಗ ವಕೀಲರು ನ್ಯಾಯಾಲಯಕ್ಕೆ ದಾವೆಯನ್ನು ಹೂಡಲು ಕೋರ್ಟ್ ಫೀ ಕಟ್ಟಬೇಕು ಮತ್ತು ಇ ಸಿ ಮತ್ತು ಮೂಲ ಪತ್ರ ಬೇಕು ಎಂದು ಹೇಳಿದ್ದರು ಅದರಂತೆ ನಾನು ಕೊಟ್ಟಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಇನ್ನು ಏನು ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ವಕೀಲರ ಹತ್ತಿರ ನನಗೆ ನ್ಯಾಯಾಲಯದಲ್ಲಿ ನ್ಯಾಯ ಕೊಡಿಸಿ ಎಂದು ಕೇಳಿಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಆಂಗ್ಲ ಭಾಷೆಯಲ್ಲಿ ಇರುವ ಕಾರಣ ಅದರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಅಕ್ಷರ ಓದಬಲ್ಲೆ ಇನ್ನುಳಿದಿದ್ದು ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ 4 ಮತ್ತು 5 ರವರಿಗೆ ಪ್ರತಿವಾದಿ 1 ರಿಂದ 3 ರವರು ಹಕ್ಕುದಾರರಾಗಿದ್ದು ಕಾನೂನು ರೀತಿಯಲ್ಲಿ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಟಿ ಪಿ ಮಂಜುಳರವರು ಒಬ್ಬರೇ ಹಕ್ಕುದಾರರಾಗಿರುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿ 4 ಮತ್ತು 5 ರವರಿಗೆ ಇನ್ನುಳಿದ ಪ್ರತಿವಾದಿ 1 ರಿಂದ 3 ರವರು ಕ್ರಯಪತ್ರವನ್ನು ಬರೆದು ಸ್ವಾಧೀನವನ್ನು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಮಂಜುಳ ಮತ್ತು ಜಗದೀಶ್ ರವರು ನನಗೆ ಕರಾರು ಮಾಡಿಕೊಟ್ಟಿರುವುದಿಲ್ಲ ಮತ್ತು ನನ್ನ ಜೊತೆ ಯಾವುದೇ ಕರಾರು ಆಗಿರುವುದಿಲ್ಲ ಎಂದರೆ ಸುಳ್ಳು. ಕರಾರಿನ ಬಗ್ಗೆ ನನ್ನ ಮನೆಯಲ್ಲಿ ಮಾತುಕತೆಯಾಗಿರುತ್ತದೆ. ಮಾತುಕತೆಯಾದ ದಿನ ನಾವು ಯಾವುದೇ ಲಿಖಿತ ಪತ್ರಗಳನ್ನು ಮಾಡಿಕೊಂಡಿರುವುದಿಲ್ಲ. ಮಾತುಕತೆಯಾಗುವ ಸಮಯದಲ್ಲಿ ಮಂಜುಳ ಮತ್ತು ಜಗದೀಶ್ ರವರು ಮಾತ್ರ ಇದ್ದೆವು. ಸದರಿ ಮಾತುಕತೆ ಆಗಸ್ಟ್ 2013 ನೇ ಇಸವಿಯಲ್ಲಿ ಆಗಿರುತ್ತದೆ.

27. ನಾನು ರೂ.15,00,000/- ಗಳನ್ನು ನೀಡಿದ್ದೆ ಎಂದು ಹೇಳಿದ್ದು ಇನ್ನುಳಿದ ರೂ.3,00,000/- ಹಣ ಕೊಡಲು 3 ವರ್ಷ ವಾಯಿದೆ ಏಕೆ ಬೇಕಾಗಿತ್ತು ಎಂದರೆ ಸಾಕ್ಷಿ ಸದರಿ ಸಮಯದಲ್ಲಿ ಕಂಪ್ಯೂಟರೀಕರಣ ಆಗುತ್ತಿದ್ದ ಕಾರಣ ಇ ಖಾತೆ ಆದರೆ ಮಾತ್ರ ನೊಂದಣಿಯಾಗುತ್ತದೆ ಎಂದು ಇದ್ದು ಸದರಿ ಸಮಯದಲ್ಲಿ ಇ ಖಾತೆ ಬಿಡದೆ ಇದ್ದ ಕಾರಣ ನಾನು 3 ವರ್ಷ ಅವಧಿ ಇರಲಿ ಎಂದು ಪತ್ರದಲ್ಲಿ ಬರೆಯಲಾಗಿತ್ತು. ಪತ್ರದಲ್ಲಿ ಇ ಖಾತೆ ಆಗಿರುವುದಿಲ್ಲ ಎಂದು ಬರೆಯಲಾಗಿರುತ್ತದೆ. ಸದರಿ ಸಮಯದಲ್ಲಿ ಸದರಿ ಸ್ವತ್ತು ನೊಂದಣಿಯಾಗುತ್ತಿತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

28. ಇ ಖಾತೆ ಮಾಡಲು ನಾನು ಪ್ರತಿವಾದಿ 1 ರಿಂದ 3 ರವರ ಹತ್ತಿರ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಅವರು ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ. ನಾನು ಅವರು ಅರ್ಜಿಯನ್ನು ಕೊಟ್ಟಿರುತ್ತಾರೋ ಇಲ್ಲವೋ ಎಂದು ಕಛೇರಿಯಲ್ಲಿ ವಿಚಾರಿಸಿರುವುದಿಲ್ಲ. ನಾನು ನಿಪಿ 3 ರಲ್ಲಿ ಇ ಖಾತೆ ಆದ ನಂತರ ನೊಂದಣಿ ಮಾಡಿಸಿಕೊಳ್ಳುವುದಾಗಿ ಬರೆದಿರುವುದಿಲ್ಲ ಆದರೆ ಕಂಪ್ಯೂಟರೀಕರಣ ಎಂದು ಬರೆದಿರುತ್ತಾರೆ.

29. ನಾನು ಕ್ರಯಪತ್ರ ಬರೆದುಕೊಡಲು ಪ್ರತಿವಾದಿಗಳಿಂದ 3 ರಿಂದ 4 ದಿನಕ್ಕೂ ಒಂದು ಸಾರಿ

ಕೇಳಿರುತ್ತೇನೆ. ಆ ರೀತಿ ನಾನು ಆರು ತಿಂಗಳು ಕೇಳಿರುತ್ತೇನೆ. ನಾನು ಮೂರು ವರ್ಷ ಹಾಕಿದ್ದರೂ ದಿನ ಕೇಳಲು ಏನು ಅವಶ್ಯಕತೆ ಇತ್ತು ಎಂದರೆ ಸಾಕ್ಷಿಯು ನಾನು ಹಣ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳ ಹತ್ತಿರ ಕ್ರಯ ಮಾಡಿಕೊಡಲು ಕೇಳಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**30.** ನಾನು ಪ್ರತಿವಾದಿಗಳಿಗೆ ಕ್ರಯ ಮಾಡಿಕೊಡಲು ವಕೀಲರಿಂದ ತಿಳುವಳಿಕೆ ಪತ್ರವನ್ನು ನೀಡಿರುವುದಿಲ್ಲ. ನಾನು ಪ್ರತಿವಾದಿಗಳಿಗೆ ನಮ್ಮ ವಕೀಲರ ಮುಖಾಂತರ ನೋಟಿಸ್ ನೀಡಿ ಬರೆದುಕೊಡಲು ಕೇಳಬೇಕಾಗಿತ್ತು ಎಂದರೆ ಸರಿ. ನಿಪಿ3 ರಲ್ಲಿ ತೋರಿಸಲಾದ ಸಾಕ್ಷಿದಾರರ ವಿಳಾಸ ಮತ್ತು ತಂದೆಯ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಸಾಕ್ಷಿದಾರರು ಲಕ್ಷ್ಮಿ ಮತ್ತು ಕೃಷ್ಣಪ್ಪ ಎಂದು ನುಡಿಯುತ್ತಾರೆ. ಸದರಿ ಸಾಕ್ಷಿದಾರರು ಲಕ್ಷ್ಮಿ ಮತ್ತು ಕೃಷ್ಣಪ್ಪ ನನಗೆ ಪರಿಚಯಸ್ಥರು ಸದರಿ ಲಕ್ಷ್ಮಿಯವರು ಕರೋನಾ ಬಂದು ತೀರಿಕೊಂಡಿರುತ್ತಾರೆ ಮತ್ತು ಕೃಷ್ಣಪ್ಪರವರು ಅವರ ಸ್ವಂತ ಊರು ರಾಯಚೂರು ಅಥವಾ ಗುಲ್ಬರ್ಗಾ ಹೋಗಿರುತ್ತಾರೆ.

**31.** ಸದರಿ ನಿಪಿ3 ನ್ನು ಸ್ಟಾಂಪ್ ವೆಂಡರ್ ಆದ ಸಾಕರಾಜುರವರು ಬರೆದಿರುತ್ತಾರೆ ಅವರು ಕೂಡ ತೀರಿಕೊಂಡಿರುತ್ತಾರೆ. ನಿಪಿ3 ನ್ನು ಪ್ರತಿವಾದಿಗಳೊಂದಿಗೆ ಮಾಡಿಕೊಂಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಪ್ರತಿವಾದಿ 1 ರಿಂದ 3 ರವರು ಹತ್ತು ವರ್ಷಗಳಿಂದ ನಾಪತ್ತೆಯಾಗಿರುತ್ತಾರೆ. ಪ್ರತಿವಾದಿ 1 ರಿಂದ 3 ರವರು ಕಾಣೆಯಾಗಿರುತ್ತಾರೆಂದು ಪೋಲಿಸ್ ಠಾಣೆಯಲ್ಲಿ ದೂರಾಗಿರುತ್ತದೆ ಅವರ ಮೇಲೆ ಚೆಕ್ ಬೌನ್ಸ್ ಪ್ರಕರಣಗಳು ಇರುತ್ತವೆ ಮತ್ತು ಅವರು ರಾಮನಗರದ ಕಾರಾಗೃಹದಲ್ಲಿ ಕೆಲವು ದಿನ ಇದ್ದರು ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ 1 ರಿಂದ 3 ರವರ ಜೊತೆಗೂಡಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸುಳ್ಳು ಮತ್ತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**